**ದಿನಾಂಕ: 22.06.2026 ರ ಅದೇಶದನ್ವಯ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಮುಖ್ಯ ವಿಚಾರಣೆ : ಅರ್ಜಿದಾರ ಪರ ಶ್ರೀ. ಆರ್ ಎಸ್ ಜಿ ವಕೀಲರಿಂದ

ಕೆ ಎಂ ಸಿ ಆಸ್ಪತ್ರೆ ಅತ್ತಾವರ ರವರು ನೀಡಿದ ಡಿಸ್ ಚಾರ್ಜ ಸಮರಿಯನ್ನು ನಿ ಪಿ 199 ಎಂದು ಗುರುತಿಸಲಾಯಿತು. 15 ವೈದ್ಯಕೀಯ ಬಿಲ್ಲುಗಳನ್ನು ಒಟ್ಟಾಗಿ ನಿಪಿ 200 ಎಂದು ಗುರುತಿಸಲಾಯಿತು. 2 ಎರಡು ವೈದ್ಯಕೀಯ ಸಲಹಾ ಚೀಟಿಗಳನ್ನು ಒಟ್ಟಾಗಿ ನಿಪಿ-201 ಎಂದು ಗುರುತಿಸಲಾಯಿತು. 6 ಎಕ್ಸ ರೇ ಫೀಲ್ಮಗಳನ್ನು ಒಟ್ಟಾರೆಯಾಗಿ ನಿಪಿ-202 ಎಂದು ಗುರುತಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಎದುರುದಾರ ಪರ ಶ್ರೀ. ಎಸ್ ಟಿ ಕೆ ವಕೀಲರಿಂದಃ

ಸದರಿ ದಿನ ನಾನು ಹಾಜರು ಪಡಿಸಿದ್ದ ದಾಖಲೆಗಳು ನಾನು ಈ ಪ್ರರಕಣದಲ್ಲಿ ನಮೂದಿಸಿದ ಅಪಘಾತದಲ್ಲಿ ಗಾಯಗೊಂಡು ಚಿಕಿತ್ಸೆಗಾಗಿ ದಾಖಲಾದ ಬಗೆಗಿನ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಸದರಿ ದಾಖಲೆಗಳನ್ನು ಸೃಷಿಸಿಕೊಂಡು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ವೈದ್ಯಕೀಯ ಬಿಲ್ಲುಗಳನ್ನು ಸೃಷಿಸಿಕೊಂಡು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ.

<u>: ಮರುವಿಚಾರಣೆ : ಇಲ್ಲ.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

**1** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ ಹಾನಗಲ್